## ಸುದ್ದಿ ಸಂಚಯ






# ತಿರುಪತಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ೨ನೇ ವಾರ್ಷಿಕೋತ್ಸವ

೨೦೧೭ರ ಆಗಸ್ಟ್ ೫ ರಿಂದ ೮ರ ವರೆಗೆ ತಿರುಪತಿ ರಾಮಕೃಷ್ಣ ಮಿಷನ್ ಆಶ್ರಮವು ೨ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಕಾರ್ಯಕ್ರಮದ ಅಂಗವಾಗಿ ಅಧ್ಯಾಪಕರ ಸಮ್ಮೇಳನ, ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರ, ಯುವಕರಿಗಾಗಿ ಹಾಗೂ ಯುವತಿಯರಿಗಾಗಿ ಪ್ರತ್ಯೇಕ ಯುವ ಸಮ್ಮೇಳನ, ಸಾರ್ವಜನಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ಆಗಸ್ಟ್ ೫ – ಅಧ್ಯಾಪಕರ ಸಮ್ಮೇಳನ:** ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧.೩೦ರ ವರೆಗೆ ನಡೆದ ಈ ಸಮ್ಮೇಳನದಲ್ಲಿ ಪ್ರೊ. ಪಿ. ವೆಂಕಟರಾಮ ರೆಡ್ಡಿ, ಸ್ವಾಮಿ ಗುಣೇಶಾನಂದಜಿ ಮಹರಾಜ್ ಹಾಗೂ ಪ್ರೊ. ರಮೇಶ್ ಘಂಟಾ ಭಾಷಣ ಮಾಡಿದರು. ಸುಮಾರು ೨೦೦ ಮಂದಿ ಅಧ್ಯಾಪಕರು ಹಾಗೂ ಅಧ್ಯಾಪಕ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ಸಾಯಂಕಾಲ ತಿರುಮಲ ತಿರುಪತಿ ದೇವಸ್ಥಾನದ ವತಿಯಿಂದ ಶ್ರೀ ಸರಸ್ವತಿ ಪ್ರಸಾದ್ ಹಾಗೂ ವೃಂದದವರಿಂದ ''**ಅನ್ನಮಾಚಾರ್ಯ ಕೀರ್ತನೆಗಳ**'' **ಗಾಯನ** ಕಾರ್ಯಕ್ರಮ ನಡೆಯಿತು.

**ಆಗಸ್ಟ್ ೬ – ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರ:** ಬೆಳಿಗ್ಗೆ ೦೯.೩೦ ರಿಂದ ೦೧.೩೦ರ ವರೆಗೆ ಭಕ್ತರಿಗಾಗಿ ನಡೆದ ಆಧ್ಯಾತ್ಮಿಕ ಶಿಬಿರದಲ್ಲಿ ನಿರ್ದೇಶಿತ ಧ್ಯಾನ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ ನಡೆದ ಬಳಿಕ ಸ್ವಾಮಿ ಗುಣೇಶಾನಂದಂಜಿ ಹಾಗೂ ಸ್ವಾಮಿ ಸುಕೃತಾನಂದಜಿಯವರಿಂದ ಪ್ರವಚನ ನಡೆಯಿತು. ಶ್ರೀ ಗೋಪಿ ಹಾಗೂ ಸಂಗಡಿಗರಿಂದ **ವಿಶೇಷ ಭಜನೆ** ಕಾರ್ಯಕ್ರಮ ನಡೆಯಿತು.

ಸಾಯಂಕಾಲ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ವಾಮಿ ಸುಕೃತಾನಂದಜಿ ಮಹಾರಾಜ್ ಅಧ್ಯಕ್ಷತೆ ವಹಿಸಿದ್ದರು. ಸ್ವಾಮಿ ಅಚಿಂತ್ಯಾನಂದಜಿ, ಸ್ವಾಮಿ ಗುಣೇಶಾನಂದಜಿ, ಸ್ವಾಮಿ ವಿನಿಶ್ಚಿಲಾನಂದಜಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ತಿರುಪತಿ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಅನುಪಮಾನಂದಜಿಯವರು ವಾರ್ಷಿಕ ವರದಿಯನ್ನು ಮಂಡಿಸಿದರು. ಈ ಕಾರ್ಯಕ್ರಮದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಕ್ತರು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

**ಆಗಸ್ಟ್ ೭ – ಯುವತಿಯರಿಗಾಗಿ ಯುವಸಮ್ಮೇಳನ:** ಈ ಕಾರ್ಯಕ್ರಮ ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧ರ ವರೆಗೆ ನಡೆಯಿತು. ಇದರಲ್ಲಿ ಗುಂಟೂರು ಶ್ರೀಶಾರದಾ ಮಠದ ಪ್ರವ್ರಾಜಿಕಾ ಭವಾನಿಪ್ರಾಣಾ ಮಾತಾಜಿ ಹಾಗೂ ಪ್ರವ್ರಾಜಿಕಾ ಬೋಧಮಯಪ್ರಾಣಾ ಮಾತಾಜಿ ಪ್ರವಚನ ನೀಡಿದರು. ಕಡಪಾ ರಾಮಕೃಷ್ಣ ಮಿಷನ್ನಿನ ಸ್ವಾಮಿ ಸೇವ್ಯಾನಂದಜಿ, ಶ್ರೀ ವೈ. ಭಾಸ್ಕರ ವರ್ಮಾ ಅವರು ಈ ಕಾರ್ಯಕ್ರಮದಲ್ಲಿ ಭಾಷಣ ಮಾಡಿದರು. ಸುಮಾರು ೨೪೦ ಮಂದಿ ಬಾಲಕಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಆಗಸ್ಟ್ ೮ – ಯುವಕರಿಗಾಗಿ ಯುವಸಮ್ಮೇಳನ:** ಈ ಕಾರ್ಯಕ್ರಮದಲ್ಲಿ ಸ್ವಾಮಿ ಸೇವ್ಯಾನಂದಜಿ, ಡಾ. ಮುರಳೀಕೃಷ್ಣ ಹಾಗೂ ಶ್ರೀ ವೈ. ಭಾಸ್ಕರ್ ವರ್ಮಾ ಮಾತನಾಡಿದರು. ಅನಂತರ ಶಿಬಿರಾರ್ಥಿಗಳೊಡನೆ ಪ್ರಶ್ನೋತ್ತರ ನಡೆಯಿತು. ಸುಮಾರು ೨೦೦ ಮಂದಿ ಯುವಕರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.






Managing Editor : Swami Atmajnananda Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020